

# ಹಸುರು ಜೇಡ

## ಮಾತೃಮಮತೆಗೆ ಮತ್ತೊಂದು ಹೆಸರು

**ಮೊಟ್ಟೆಗಳನ್ನು ಪುಟ್ಟ ಮೂಟೆಯಲ್ಲಿ ಅಪ್ಪಿ ಹಿಡಿದು ಓಡಾಡುವ ತಾಯಿಜೇಡದ ವಾತ್ಸಲ್ಯ ಅಸಾಧಾರಣ. ಆಹಾರವಿಲ್ಲದೇ ಮೂರು ವಾರಗಳ ಕಾಲ ಮೂಟೆ ಹೊತ್ತು ತಿರುಗಾಡುವ ಜೇಡಕ್ಕೆ ತನ್ನ ಮರಿಗಳನ್ನು ಕಾಪಾಡಿಕೊಳ್ಳುವುದೊಂದೇ ಗುರಿ.**

■ ಶಶಿಧರಸ್ವಾಮಿ ಆರ್. ಹಿರೇಮಠ

ಜಿಟಿಜಿಟಿ ಮಳೆ ನಡುವೆ ಗ್ವಾರಪ್ಪನಗುಡ್ಡದ ಕುರುಚಲು ಕಾಡಿಗೆ ಹೊರಟಿದ್ದೆ. ಮಣ್ಣಿನ ಹಾದಿಯ ಅಕ್ಕಪಕ್ಕ ಕಳೆ ಸಸ್ಯಗಳದ್ದೇ ಕಾರುಬಾರು. ಅಲ್ಲೇ ಬಿದ್ದಿದ್ದ ಮರುಳುಮ್ಮತ್ತಿ ಗಿಡದಲ್ಲಿ ನೂಲಿನ ಉಂಡೆಯಂತಿರುವ ಮಾಸಲು ಬಿಳಿ ಬಣ್ಣದ ಪುಟ್ಟ ಚೆಂಡೊಂದು ಚಲಿಸಿದಂತೆ ಕಂಡಿತು.

ಹತ್ತಿರ ಹೋಗಿ ನೋಡಿ ಚಕಿತನಾದೆ. ಹಸುರು ಜೇಡವೊಂದು ಆ ಚೆಂಡನ್ನು ಜೋಪಾನವಾಗಿ ಬಾಹುಗಳಲ್ಲಿ ಹಿಡಿದು ಕುಳಿತಿತ್ತು. ನಾ ಓದಿದ್ದ ಸಂಗತಿ ನೆನಪಿಗೆ ಬಂತು– ಈ ಪುಟ್ಟ ಚೆಂಡು, ಜೇಡದ 'ಮೊಟ್ಟೆ ಮೂಟೆ' ಎಂದು. ಇದನ್ನು ಮೊಟ್ಟೆ ಚೀಲ ಅಥವಾ ಮೊಟ್ಟೆಗಳ ಕೋಶಚೀಲ ಎನ್ನಬಹುದು. ಇಂಗ್ಲಿಷ್‌ನಲ್ಲಿ ಎಗ್ ಸ್ಯಾಕ್ ಎನ್ನುತ್ತಾರೆ.

ಈ ಜೇಡದ ಹೆಸರು 'ಹಸುರು ಜೇಡ' ಅಥವಾ 'ಹಸುರು ಲಿಂಕ್ಸ್ ಜೇಡ'. ಇಂಗ್ಲಿಷ್‌ನಲ್ಲಿ 'ಗ್ರೀನ್ ಲಿಂಕ್ಸ್ ಸ್ಪೈಡರ್' ಎಂದು ಕರೆಯುತ್ತಾರೆ. ಇದರ ವೈಜ್ಞಾನಿಕ ಹೆಸರು ಪ್ಯೂಸೆಟಿಯಾ ವಿರಿಡಾನಾ (Peucetia viridana). ಸಂಧಿಪದಿಗಳ, ಅರಾಕ್ನಿಡಾ ವರ್ಗದ, ಅರೆನೀ ಗಣದ, ಆಕ್ಸಿಯೋಪಿಡೇ ಕುಟುಂಬಕ್ಕೆ ಸೇರಿದ ಜೇಡ ಇದು.

ಗಂಡು ಜೇಡಗಳು ಹೆಣ್ಣಿಗಿಂತ ಗಾತ್ರದಲ್ಲಿ ಚಿಕ್ಕವಾಗಿರುತ್ತವೆ. ತ್ರಿಕೋನಾಕೃತಿಯ ಶಿರೋವಕ್ಷವಿದ್ದು, ಹಸುರು ಬಣ್ಣದ ಉದರ ಉದ್ದವಾಗಿರುತ್ತದೆ. ಅದರ ಮೇಲೆ ಹಳದಿ–ಬಿಳಿ ಬಣ್ಣದ ಕಲೆಗಳಿರುತ್ತವೆ. 8 ಕಪ್ಪಾದ ಕಣ್ಣುಗಳಿದ್ದು, ಮುಂಭಾಗದ ಎರಡು ಕಣ್ಣುಗಳು ದೊಡ್ಡವು. ಮಾಸಲು ಹಸುರು ಬಣ್ಣದ ನಾಲ್ಕು ಜೊತೆ ಕಾಲುಗಳು ಉದ್ದ ಮತ್ತು ಬಲವಾಗಿದ್ದು ಕಪ್ಪಾಗಿ ಉದ್ದ ಮುಳ್ಳುಗಳಂತಿರುವ ರೋಮ ಹೊಂದಿವೆ.

ಈ ಜೇಡ ಬರೀ ದ್ರವರೂಪದ ಆಹಾರ ಸೇವಿಸುತ್ತದೆ. ಆಹಾರ ಸೇವನೆಗೆ ವಿಶೇಷ ತಂತ್ರ ಬಳಸುತ್ತದೆ. ಜೀರ್ಣರಸ ಸ್ರವಿಸಿ ಬಲಿಯಾದ ಬೇಟೆಯ ಅಂಗಾಂಗಗಳನ್ನು ಮುದ್ದೆಯಾಗಿಸಿ ದ್ರವರೂಪಕ್ಕೆ ತರುತ್ತದೆ. ಆ ದ್ರವಾಹಾರವನ್ನು ಹೀರಿಕೊಳ್ಳುತ್ತದೆ. ಇವು ಬಲೆ ನೇಯುವುದಿಲ್ಲ. ಗಿಡದ ಎಲೆಗಳ ಮಧ್ಯದಲ್ಲಿ ಛದ್ಮವೇಷಧಾರಿಯಾಗಿ ಕುಳಿತು ಹೂವಿನ ಮಕರಂದ ಹೀರಲು ಬರುವ ಕೀಟಗಳನ್ನು ಬೇಟೆಯಾಡುವ ಚತುರ ಬೇಟೆಗಾರ.

### ಮೊಟ್ಟೆ ಮೂಟೆಯ ಹೊತ್ತು...

ಜುಲೈ–ಅಕ್ಟೋಬರ್ ಜೇಡದ ಸಂತಾನಾಭಿವೃದ್ಧಿ ಕಾಲ. ತನ್ನ ಪ್ರಭೇದದ ಹೆಣ್ಣು ಜೇಡವಿರುವ ಸೂಚನೆ ವಾಸನೆ ಮೂಲಕ ಗಂಡು ಜೇಡಕ್ಕೆ ಸಿಕ್ಕೊಡನೆ ವಿಲಕ್ಷಣ ಶಬ್ದ ಹೊರಡಿಸುತ್ತದೆ. ಕಾಲುಗಳ ಮೂಲಕ ಕಂಪನ ಮೂಡಿಸುತ್ತದೆ. ಇದು ಹೆಣ್ಣಿಗೆ ಪ್ರೇಮ ಸಂದೇಶದಂತೆ.



ಹೆಣ್ಣಿಗೆ ಮಿಲನಕೂಟದ ಆಸಕ್ತಿಯಿದ್ದರೆ ಗಂಡಿನತ್ತ ಮುನ್ನಡೆಯುತ್ತದೆ. ದೀರ್ಘಾವಧಿ ಪ್ರಣಯಾರಾಧನೆ ನಡೆಯುತ್ತದೆ. ಮಿಲನದ ನಂತರ ಹೆಣ್ಣು ಗಂಡಿನ ಮೇಲೆ ದಾಳಿ ಮಾಡಿರುವ ಉದಾಹರಣೆಯೂ ಇದೆ. ಇದಾದ ನಂತರ ಅಂಡಾಕಾರದ ಚೆಂಡಿನಂತೆ ನೂಲಿನಿಂದ ಸುತ್ತಿ ಕಟ್ಟಿದಂಥ ಮೊಟ್ಟೆ ಮೂಟೆ ರಚಿಸುತ್ತದೆ. ಮೊಟ್ಟೆಗಳನ್ನು ಮೊಟ್ಟೆ ಚೀಲದಲ್ಲಿ ಠೇವಣಿ ಮಾಡಿ ಸುತ್ತಿ ಭದ್ರವಾಗಿ ಮುಚ್ಚುತ್ತದೆ.

ತಾಯಿ ಜೇಡ, ಆಹಾರವಿಲ್ಲದೇ ಮೂರು ವಾರಗಳ ಕಾಲ ಮೊಟ್ಟೆ ಮೂಟೆ ಹೊತ್ತು ತಿರುಗಾಡುತ್ತದೆ. ಈ ಸಮಯದಲ್ಲಿ ಯಾರೇ ಹತ್ತಿರ ಬಂದರೂ ಕೋಪದಿಂದ ದಾಳಿ ಮಾಡುತ್ತದೆ. ತನ್ನ ಮೊಟ್ಟೆ ಮೂಟೆಯನ್ನು ಕಾಪಾಡಿಕೊಳ್ಳುವ ಮಾತೃವಾತ್ಸಲ್ಯ ಅದರದ್ದು.

ಈ ಮೂಟೆಯಲ್ಲಿ ಸುಮಾರು 25ರಿಂದ 200ರವರೆಗೂ ಕಿತ್ತಳೆ ಬಣ್ಣದ ಮೊಟ್ಟೆಗಳಿರುತ್ತವೆ. ತಾಯಿ ಜೇಡ ಈ ಮೊಟ್ಟೆ ಮೂಟೆಯನ್ನು ಸದಾಕಾಲ ತನ್ನ ಬಾಹುಗಳಲ್ಲಿ ಹಿಡಿದುಕೊಂಡಿರುತ್ತದೆ. ಈ ಮೊಟ್ಟೆಗಳಿಗೆ ಕಣ್ಣುಗಳು, ಜೀರ್ಣಾಂಗ ಮತ್ತು ನೂಲು ಬಿಡುವ ಅಂಗಗಳು ಮೂಡಿದ ನಂತರ ಮರಿ ಜೇಡಗಳು ಮೊಟ್ಟೆ ಚೀಲದಿಂದ ಹೊರಬರಲು ಆರಂಭಿಸುತ್ತವೆ.

ಮರಿಗಳು ಹೊರಬರುವ ಸೂಚನೆ ಸಿಗುತ್ತಿದ್ದಂತೆ ಮೊಟ್ಟೆ ಚೀಲವನ್ನು ಒದ್ದೆಯಾಗಿಸಿ, ಹರಿದುಹಾಕಿ ಮರಿಗಳು ತಾಯಿ ಜೇಡ ಸಹಾಯ ಮಾಡುತ್ತದೆ. ಮರಿಗಳೊಂದಿಗೆ ಹಲವು ವಾರ ವಾಸಿಸುತ್ತದೆ. ಮರಿಗಳಿಗೆ ಆಹಾರದ ಮೂಲಗಳ ಪತ್ತೆ ಮತ್ತು ಅಪಾಯದ ಬಗ್ಗೆ ಎಚ್ಚರಿಕೆಯ ಪಾಠ ಮಾಡುತ್ತದೆ. ■